

ದೇವು ಪತ್ತಾರ
ಕಲೆ: ನಂಜುಂಡಸ್ವಾಮಿ

# ವರಕವಿ ಬೇಂದ್ರೆ

## ಕವಿಯೊಬ್ಬ- ನಾಮ ಹಲವು

ಕನ್ನಡ ನವೋದಯ ಕಾವ್ಯದ ಹರಿಕಾರರಲ್ಲಿ ಒಬ್ಬರಾದ ಕವಿ ದ.ರಾ. ಬೇಂದ್ರೆಯವರು 'ದಂತಕತೆ'ಗಳಿಗೆ ಕಾರಣರಾದ ಕವಿ. 'ನವೋದಯ' ಎನ್ನುವುದು 20ನೇ ಶತಮಾನದ ಆರಂಭದ ವರುಷಗಳಲ್ಲಿ ಕನ್ನಡದಲ್ಲಿ ಕಾಣಿಸಿಕೊಂಡ ವಿಭಿನ್ನ-ವಿಶಿಷ್ಟ ವಿದ್ಯಮಾನ. ಕವಿತೆ ಕಾಲದ ಅಗತ್ಯ. ಆಯಾಕಾಲದ ಅವಶ್ಯಕತೆಗೆ ಅನುಗುಣವಾಗಿಯೇ ಕವಿತೆಯೂ ಮೈತಳೆಯುತ್ತದೆ. 'ನವೋದಯ' ಎಂದು ಈಗ ಗುರುತಿಸಲಾಗುವ ಕಾಲಘಟ್ಟವು ಸರಿಸುಮಾರು 1915ರ ಆಸುಪಾಸಿನಲ್ಲಿ ಆರಂಭವಾಯಿತು. ನಂತರದ ನಾಲ್ಕು ದಶಕದವರೆಗೆ ವಿಸ್ತರಿಸಿತ್ತು.

ನವೋದಯವು 'ಕನ್ನಡದ ಕಣ್ವ' ಎಂದು ಕರೆಯಲಾಗುವ ಬಿ.ಎಂ. ಶ್ರೀಕಂಠಯ್ಯ (1884-1946) ಅವರು ಇಂಗ್ಲಿಷ್ ಕವಿತೆಗಳನ್ನು ಕನ್ನಡೀಕರಿಸುವ ಪ್ರಕ್ರಿಯೆಯ ಮೂಲಕ ಆರಂಭವಾಯಿತು ಎಂದು ವಿದ್ವಾಂಸರ ಅಭಿಪ್ರಾಯ. ಮೇಲ್ನೋಟಕ್ಕೆ ಹಾಗೂ ಬಹುಮಟ್ಟಿಗೆ ಅದು ನಿಜ ಕೂಡ. ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಪುಸ್ತಕ ರೂಪದಲ್ಲಿ ಪ್ರಕಟವಾದದ್ದು 1924ರಲ್ಲಿ. ಮೊದಲ ಆವೃತ್ತಿಯ 'ಇಂಗ್ಲಿಷ್ ಗೀತಗಳು' ಕೃತಿಯಲ್ಲಿ ಒಟ್ಟು ಇಪ್ಪತ್ನಾಲ್ಕು ಕವಿತೆಗಳಿದ್ದವು. ಈ ಅನುವಾದದ ಪ್ರಕ್ರಿಯೆ ಆರಂಭವಾದದ್ದು ಶ್ರೀಯವರೇ ಹೇಳುವ ಹಾಗೆ 1919ರಲ್ಲಿ. ಶ್ರೀಯವರ ಗುರುಗಳಾದ ಬಾಪು ಸುಬ್ಬರಾಯರು 'ವಿದ್ಯಾದಾಯಿನಿ' ಪತ್ರಿಕೆಯಲ್ಲಿ ಮೂರು ಅನುವಾದಿತ ಕವಿತೆಗಳು ಪ್ರಕಟವಾಗುವಂತೆ ನೋಡಿಕೊಂಡರು. ನಂತರದ ದಿನಗಳಲ್ಲಿ 'ಕರ್ನಾಟಕ ಜನಜೀವನ' ಪತ್ರಿಕೆಯಲ್ಲಿ ಮತ್ತಷ್ಟು ಕವಿತೆಗಳು ಕನ್ನಡೀಕರಣಗೊಂಡು ಪ್ರಕಟವಾದವು. ತೀ.ನಂ. ಶ್ರೀಕಂಠಯ್ಯ (1906-1966) ಅವರು ಬರೆದಿರುವಂತೆ (1952ರ ಪ್ರಸ್ತಾವನೆ) 60 ಕವಿತೆಗಳನ್ನು ಒಳಗೊಂಡ 'ಇಂಗ್ಲಿಷ್ ಗೀತಗಳು' ಸಂಕಲನವನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರು 1926ರಲ್ಲಿ ಪ್ರಕಟಿಸಿದರು. ಈ ಸಂಕಲನದಲ್ಲಿ ಅನುವಾದಗಳಲ್ಲದೆ, ಬಿಎಂಶ್ರೀ ಅವರ ಸ್ವತಂತ್ರ ಕವಿತೆಗಳಾದ 'ಭರತಮಾತೆಯ ವಾಕ್ಯ', 'ಮೈಸೂರು ಮಕ್ಕಳು' ಕವಿತೆಗಳೂ ಸೇರಿಕೊಂಡಿದ್ದವು.